ಪ್ರತಿ ಊರಿಂದು, ಪ್ರತಿ ಮನುಷ್ಯಂದು ಟೀವ್ಯಾಗೇ ಬರ್ಬೇಕು ಸುದ್ದಿ. ಹಂಗಂದ್ರೆ ಅದು ಸುದ್ದಿ ಅಂಬಂಗ ಜನರ ತಲ್ಯಾಗ ತುಂಬಿಬುಟ್ಟಾದ. ಅದ್ಕೇ ಹೆಂಗ ಕಲೆ ಬುಳ್ತಾರ ನೋಡು ಗಾ ಸಾಕಾಗ್ಯಾದ' ಅಂದ.

ತಿಮೋತಿ ಆ ಮಾತಿಗೆ ನಸುನಕ್ಕು, ಉತ್ತರವೆಂಬಂತೆ ಪತ್ರಿಕೆಯ ಮುಖಪುಟದಿಂದ ಒಂದು ಸುದ್ದಿ ಓದಿದ 'ಬಾರಕೂರು ಜಿಲ್ಲೆಯ ಮರೆತೂರಿನಲ್ಲಿ ನಡೆದಿರುವ ಚಿಂತನ ಬೈಠಕ್ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬೆಳಗಿನ ಯೋಗಾಭ್ಯಾಸ ಕಾರ್ಯಕ್ರಮದಲ್ಲಿ ಅತ್ಯುತ್ಸಾಹದಿಂದ ಪಾಲ್ಗೊಂಡರು. ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗಳಿಗೆ ಉಲ್ಲಾಸದಿಂದಲೇ ಉತ್ತರಿಸಿದ ಮುಖ್ಯಮಂತ್ರಿಗಳು ಇದು ಸರ್ಕಾರಿ ಕಾರ್ಯಕ್ರಮವಾಗಿರದೆ ಪಕ್ಷದ ಕಾರ್ಯಕ್ರಮವಾಗಿದೆಯೆಂದು ಸ್ಪಷ್ಟಪಡಿಸಿ, ಮುಂದಿನ ಮೂರು ವರ್ಷಗಳ ಕಾಲ ತಾವೇ ಸಿಎಂ ಆಗಿ ಮುಂದುವರೆಯಲಿದ್ದು ಹಲವಾರು ರೈತಪರ ಯೋಜನೆಗಳನ್ನು ಜಾರಿಗೆ ತರಲಿರುವುದಾಗಿ ತಿಳಿಸಿದರು.'

'ಈ ಸೋಕಾಲ್ಡ್ ಚಿಂತನ ಬೈಠಕ್ಕಿಗಾಗಿ ಸಿಎಂ ಆಫೀಸ್ ಮತ್ತು ಸೆಕ್ರೆಟರಿಯೇಟಿನ ಎಲ್ಲ ಆಫೀಸರ್ಸ್‌ನ ಅವರ ವೆಹಿಕಲ್ಸ್‌ಗುಳ್ನ ಬಳಸಿಕೆಂಡಾರ. ಇದು ಪಕ್ಷದ ಕಾರ್ಯಕ್ರಮ ಆಗಿದ್ರೆ ಸರ್ಕಾರಿ ಯಂತ್ರದ ದುರ್ಬಳಕೆ ಮಾಡಿದಂಗಾಯ್ತು. ಒಳ್ಳೆ ಆ್ಯಂಟಿಸ್ಟೋರಿ ಮಾಡ್ಬಹುದು' ಅಂದ. ಈ ಇವೆಂಟ್ ಇಲ್ಲೇ ಆಗಿತ್ತಂದ್ರೂ ಪ್ರಹ್ಲಾದ ಈ ಸುದ್ದಿ ಮಾಡ್ತಿದ್ದಿಲ್ಲ ಎಂದು ತಿಮೋತಿಗೆ ಗೊತ್ತು. ಪ್ರಹ್ಲಾದನಿಗೆ ಒಳ್ಳೆ ನ್ಯೂಸ್ ಸೆನ್ಸ್ ಇದೆ. ಆದರೆ ಅವನು ತುಂಬಾ ಪ್ರಾಕ್ಟಿಕಲ್. ಬೇರೆ ಕೆಲವು ಪ್ರಾಮಾಣಿಕ ಪತ್ರಕರ್ತರಿಗೆ ಜನಪರ ಕಾಳಜಿ ಮತ್ತು ಬರೆದು ದಕ್ಕಿಸಿಕೊಳ್ಳುವ ಧೈರ್ಯ ಎರಡೂ ಇವೆ. ಆದರೆ ಅವರಿಗೆ ಹೀಗೆ ನ್ಯೂಸನ್ನು ಬೇರೆ ಬೇರೆ ಆ್ಯಂಗಲ್‌ನಿಂದ ನೋಡುವ ಸೆನ್ಸಿಬಿಲಿಟಿ ಇಲ್ಲ ಎಂದು ಆಲೋಚಿಸಿದ ತಿಮೋತಿ.

'ಅಲ್ಲ, ನಮ್ಮ ಸಿಡುಕಿನ ಸಿಎಂ, ಮೀಡಿಯಾದವರ ಪ್ರಶ್ನೆಗಳಿಗೆ ಉಲ್ಲಾಸದಿಂದ ಉತ್ತರಿಸಿದ್ದೇ ಭಾರಿ ಆಶ್ಚರ್ಯ ಆಗ್ಯಾದ ನನಗ' ಎಂದು ಕೆದರಿದ ತಿಮೋತಿ.

'ಉಲ್ಲಾಸಕ್ಕೆ ಕಾರಣ ಯೋಗಾಭ್ಯಾಸನೋ, ಕೋಆಪರೇಟಿವ್ ಮಿನಿಸ್ಟರ್ ಕಂಪೆನಿನೋ? ಹೋಗ್ಲಿಬುಡಪ. ನಮ್ದೇ ನಮಗ ಮಾಗಾಣಿ ಆಗ್ಯಾದ. ಹತ್ತಕ್ಕ ಪ್ರೆಸ್ ಮೀಟ್ ಐತೆಲ್ಲ ಡೀಸೀದು ಬರ್ಬೇಕಾ ಇಲ್ಲ?' ಅಂದ ಪ್ರಹ್ಲಾದ.

'ಬರ್ಬೇಕು' ಅಂದ ತಿಮೋತಿ ಮಳೆಯಲ್ಲಿ ತೊಯ್ದ ಒಂಟಿ ಗುಬ್ಬಿಯಂತೆ ಮೈ ಜುಮುಗರಿಸಿ ಎದ್ದು ನಿಂತ.

ರಾತ್ರಿ ಮತ್ತೆ ಮಳೆ ಹಚ್ಚಿ ಬಾರಿಸಿತು.

## 3

ಮರುದಿನ ತಿಮೋತಿ ತನ್ನ ಗನ್ ಶಾಟ್ ಪತ್ರಿಕಾ ಕಚೇರಿಗೆ ಹೋದಾಗ ಮನಸ್ಸು ಭಾರವಾಗಿತ್ತು.

ಎಲ್ಲ ಕಡೆಯಿಂದ ಮಳೆ ಹಾನಿಯ ವರದಿಗಳು ದಂಡಿ ದಂಡಿಯಾಗಿ ಬರತೊಡಗಿದ್ದವು. ವೃತ್ತಿಪರ ಕರೆವೀರರು `ಮಳೆಯಿಂದ ತತ್ತರಿಸಿದ ಜನತೆ ಸಂಯಮ ಕಳೆದುಕೊಳ್ಳಬಾರದೆಂದು' ಕರೆ ನೀಡಿದ ಪತ್ರಿಕಾ ಹೇಳಿಕೆಗಳೂ ಅಷ್ಟೇ ದಂಡಿ ದಂಡಿಯಾಗಿ ಬಂದು ಬೀಳತೊಡಗಿದ್ದವು. ಎಲ್ಲ ಕರೆಗಳೂ ಸಂಯಮ ಕಳೆದುಕೊಳ್ಳಬಾರದೆಂದೇ ಇರುವುದರ ಹಿಂದಿನ ಮಾಸ್ಟರ್ ಮೈಂಡ್ ಯಾರೆಂಬುದು ತಿಮೋತಿಗೆ ಹೊಳೆಯದಿರಲಿಲ್ಲ. ಈ ಸುದ್ದಿಯನ್ನು ನೋಡಿ ನೋಡಿಯಾದರೂ ಜನ ಸರ್ಕಾರದ ವಿರುದ್ಧ ಸಂಯಮ ಕಳೆದುಕೊಳ್ಳಲೆಂಬ ಪ್ರಚೋದನೆಯ ಉದ್ದೇಶ ಇದರ ಹಿಂದೆ ಕೆಲಸ ಮಾಡುತ್ತಿರುವುದನ್ನು ಅವನು ಬಹುಬೇಗ ಗ್ರಹಿಸಿದ. ಇಂಥ ಮನಸ್ಸುಗಳ ಬಗ್ಗೆ ಹೇಸಿಗೆಪಟ್ಟುಕೊಳ್ಳುತ್ತಿರುವಾಗಲೇ ಸಂಪಾದಕರು ತಿಮೋತಿಗೆ ಬರಹೇಳಿದರು. 'ಸರ್' ಎನ್ನುತ್ತ ಕುಳಿತುಕೊಂಡ.

'ತಿಮೋತಿ ಏನಿದೆ ಇವತ್ತಿನ ಲೀಡ್?' ಎಂದರು ಸಂಪಾದಕ ವಿ.ಕೆ. ದೇಸಾಯಿಯವರು.

## ಹನಿ ಹನಿ ಮಾಲೆ

ನೆರಳು ನೀಡುತ್ತಿದ್ದ ಮರ
ಹಣ್ಣುಗಳ ಹೊಮ್ಮಿಸಿತು
ದಾರಿಹೋಕರು ಕಲ್ಲುಗಳ
ಬೀಸಲು ತೊಡಗಿದರು.

***

ನಮಗೆ ಅರಮನೆ
ಮಹಡಿ ಬಂಗಲೆ ದೊಡ್ಡಮನೆ
ದೇವರಿಗೆ ಅದರೊಳಗೊಂದು
ಸಣ್ಣ ಕೋಣೆ.

***

ಮನೆಗೆ ಮೊಮ್ಮಕ್ಕಳು ಬಂದರು
ಅಜ್ಜ ಆನೆ–ಒಂಟೆ–ಕುದುರೆಯಾದರು.

***

ಮಗ ಮಹಡಿ ಮನೆಯನ್ನೇ ಕಟ್ಟಿದ
ಏರಲಾಗದ ಮೆಟ್ಟಿಲುಗಳನ್ನು ನೋಡುತ್ತಾ
ಕೆಳಗೆ ಮೂಲೆಯಲ್ಲೇ ಮಲಗಿಕೊಂಡರು
ಮುದುಕ ತಾಯಿ–ತಂದೆಯರು.

***

ತಮ್ಮ ಮಕ್ಕಳು ಸುಖವಾಗಿರಲೆಂದು
ದೇವರಿಗೆ ಪ್ರಾರ್ಥನೆ ಸಲ್ಲಿಸಿದರು
ತಾಯಿತಂದೆಯರು ವೃದ್ಧಾಶ್ರಮದಲ್ಲಿ.

– ಜರಗನಹಳ್ಳಿ ಶಿವಶಂಕರ್



ಈಶ್ವರ ಬಡಿಗೇರ